ಕರ್ನಾಟಕ ಸರ್ಕಾರ

(ಸಿ.ಆರ್.ಪಿ. 67)

| ಹೇಳಿಕೆ ಹಾಳೆ<br>(ಆರ್.ಪಿ.ಸಂಖ್ಯೆ 57)<br>ನಮೂನೆ ಸಂಖ್ಯೆ 4<br>(ಸಿವಿಲ್) |
|---|

ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ. ದಾಂಡೇಲಿ
ಇವರ ನ್ಯಾಯಾಲಯದಲ್ಲಿ.
ಸಿ.ಸಿ. ನಂ. 96-2016
........................... ವಿರುದ್ಧ ............................

PW 01
CW 01

ಸಾಕ್ಷಿಯ ಹೆಸರು : ಮಲ್ಲಪ್ಪ ಶೇಖರ ಹೂಗಾರ
ತಂದೆಯ ಹೆಸರು : ಶೇಖರ ಹೂಗಾರ
ವಯಸ್ಸು : 40 ವರ್ಷ
ಉದ್ಯೋಗ : ಪಿ.ಐ., ಸೆನ್ ಪೊಲೀಸ್ ಠಾಣೆ.
ವಾಸ್ತವ್ಯ : ಹುಬ್ಬಳ್ಳಿ.

ದಿನಾಂಕಃ 27-10-2022 ರಂದು ಸತ್ಯಪ್ರತಿಜ್ಞೆ ಮೇಲೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರಿಂದ.

ನಾನು 2014 ರಿಂದ 2016 ರವರೆಗೆ ದಾಂಡೇಲಿ ಪೊಲೀಸ್ ಠಾಣೆಯಲ್ಲಿ ಪಿ.ಎಸ್.ಐಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕಃ 30-09-2015 ರಂದು ರಾತ್ರಿ 8-45 ಗಂಟೆಗೆ ನಾನು ಠಾಣಾ ಕರ್ತವ್ಯದಲ್ಲಿದ್ದಾಗ ಚಾಸಾ 15 ರವರು ಸುಭಾಶ ನಗರದಲ್ಲಿರುವ ಆರೋಪಿ ದಾವಲಸಾಬ ನಿರ್ಲಗ್ಗಿರವರು ಅಸಹಾಯಕ ಬಡ ಜನರಿಂದ ಚೆಕ್ಕ ಹಾಗೂ ಪಾಸ್‌ಬುಕ್‌ಗಳನ್ನು ಇಟ್ಟುಕೊಂಡು ಅವರಿಗೆ ತಿಂಗಳಿಗೆ 15 - ಬಡ್ಡಿ ವಸೂಲು ಮಾಡುತ್ತಿದ್ದಾರೆ ಎಂದು ಹಾಗೂ ಲೇವಾದೇವಿ ವ್ಯವಹಾರ ಮಾಡುತ್ತಿದ್ದಾರೆಂದು ಬಂದ ಮಾಹಿತಿಯನ್ನು ನನಗೆ ತಿಳಿಸಿದ್ದು, ಕೂಡಲೇ ನಾನು ಠಾಣೆಯಲ್ಲಿ ಹಾಜರಿದ್ದ ಸಿಬ್ಬಂದಿಗಳಾದ ಚಾಸಾ 13 ರಿಂದ 20 ರವರಿಗೆ ಬಂದ ಮಾಹಿತಿಯನ್ನು ತಿಳಿಸಿ, ಚಾಸಾ 15 ರವರಿಗೆ ಇಬ್ಬರು ಪಂಚರನ್ನು

ಕರೆದುಕೊಂಡು ಬರುವುದಾಗಿ ತಿಳಿಸಿ ಸುಭಾಶ ನಗರ ಮಶೀದಿ ಬಳಿ ಬರಲು ಸೂಚಿಸಿರುತ್ತೇನೆ. ನಾನು ಹಾಗೂ ಈ ಮೇಲೆ ಹೇಳಿದ ಉಳಿದ ಸಿಬ್ಬಂದದಿಗಳು ಸರ್ಕಾರಿ ಜಿಪ್ ಸಂಃ ಕೆಎ-30-ಜಿ-83 ನೇದ್ದನ್ನು ಠಾಣೆಯಿಂದ ರಾತ್ರಿ 8-48 ಗಂಟೆಗೆ ಹೊರಟು ಆರೋಪಿಯ ಮನೆಯನ್ನು ಶೋಧೀಸಲು ಶೋಧನಾ ವಾಟೆಂಟ್‌ನ್ನು ಪಡೆದುಕೊಳ್ಳಲು ಮಾನ್ಯ ನ್ಯಾಯಾಧೀಶರಿಂದ ಶೋದನಾ ವಾರೆಂಟ್‌ನ್ನು ಪಡೆದುಕೊಂಡು ರಾತ್ರಿ 8-56 ಗಂಟೆಗೆ ನಾನು ಸುಭಾಶ ನಗರ ಮಶೀದಿ ಬಳಿ ಹೋದಾಗ ಚಾಸಾ 15 ರವರು ಇಬ್ಬರು ಪಂಚರನ್ನು ಕರೆ ತಂದಿದ್ದು, ಸದ್ರಿ ಅವರಿಗೆ ಬಂದ ಮಾಹಿತಿಯನ್ನು ತಿಳಿಸಿ ಪಂಚರಾಗಲು ಒಪ್ಪಿಕೊಂಡಿರುತ್ತಾರೆ.

ನಂತರ ಪಂಚರು ಹಾಗೂ ಸಿಬ್ಬಂದಿಯವರು ಸೇರಿಕೊಂಡು ಸುಭಾಶ ನಗರದಲ್ಲಿರುವ ಆರೋಪಿಯ ಮನೆಗೆ ರಾತ್ರಿ 9-00 ಗಂಟೆಗೆ ತಲುಪಿ ಮನೆಯ ಹಿಂದೆ ಹೋಗಿ ಆರೋಪಿತನನ್ನು ಮನೆಯ ಹೊರಗೆ ಕರೆಯಿಸಿ ಶೋಧನಾ ಸಮುಚ್ಚತ ವಾರೆಂಟ್‌ನ್ನು ತೋರಿಸಿ, ನಾವೆಲ್ಲರೂ ಮನೆಯ ಒಳಗೆ ಹೋದಾಗ ಅಲ್ಲಿ ಮೊದಲಿಗೆ ಒಂದು ಹಾಲ್, ಅಡುಗೆ ಕೋಣೆ, ಬೆಡ್' ರೂಂ ಇದ್ದು, ನಾವು ಬೆಡ್‌ರೂಂ ಒಳಗೆ ಹೋಗಿ ಅಲ್ಲಿದ್ದ ಅಲ್‌ಮೇರಾವನ್ನು ತೆಗೆದು ನೋಡಾಲಾಗಿ ಒಂದು ಕವರ್ ಇದ್ದು, ಅದರೊಳಗೆ 7 ಚೆಕ್ ಹಾಗೂ 2 ಪಾಸ್‌ಬುಕ್‌ಗಳು ಇದ್ದವು. ಅವುಗಳಲ್ಲಿ 4 ಚೆಕ್ ಕೆಡಿಸಿಸಿ ಬ್ಯಾಂಕ್‌ಗೆ ಸಂಬಂಧಿಸಿದ್ದು, ಇನ್ನು 2 ಚೆಕ್ಕಗಳು ಎಸ್.ಬಿ.ಎಮ್‌ಗೆ ಸಂಬಂಧಿಸಿದ್ದು, ಹಾಗೂ 1 ಕಾರ್ಪೊರೇಶನ್ ಬ್ಯಾಂಕ್‌ಗೆ ಸಂಬಂಧಿಸಿದ್ದು ಇರುತ್ತದೆ. ಮತ್ತು 2 ಪಾಸ್‌ಬುಕ್‌ಗಳು ಕೆಡಿಸಿಸಿ ಬ್ಯಾಂಕ್‌ಗೆ ಸಂಬಂಧಿಸಿದ್ದಾಗಿರುತ್ತವೆ. ಚೆಕ್ಕ ಹಾಗೂ ಪಾಸ್ ಬುಕ್‌ಗಳ ಬಗ್ಗೆ ಆರೋಪಿಯನ್ನು ವಿಚಾರಿಸಲಾಗಿ, ಆರೋಪಿ ಯಾವುದೇ ನಿಖರವಾದ ವಿವರಣೆಯನ್ನು ನೀಡಿರುವುದಿಲ್ಲ. ಹಾಗೂ ಲೇವಾದೇವಿ ವ್ಯವಹಾರವನ್ನು ಮಾಡಲು

ಯಾವುದೇ ಪರವಾನಿಗೆ ಇಲ್ಲ ಎಂದು ತಿಳಿಸಿರುತ್ತಾರೆ. ಸದ್ರಿ ಚೆಕ್ಕ ಹಾಗೂ ಪಾಸ್ ಬುಕ್‌ಗಳನ್ನು ತಾನು ವಿವಿಧ ವ್ಯಕ್ತಿಗಳಿಂದ ಭದ್ರತೆಗಾಗಿ ಪಡೆದುಕೊಂಡಿದ್ದು, ಹಾಗೂ ಅವರುಗಳಿಂದ ಮಾಸಿಕ ಶೇಕಡಾ 15 ಪ್ರತಿಶತ ಬಡ್ಡಿಯಂತೆ ಸಾಲವನ್ನು ವಸೂಲಿ ಮಾಡುತ್ತಿರುತ್ತೇನೆ ಎಂದು ತಿಳಿಸಿರುತ್ತಾನೆ.

ನಂತರ ಪ್ರತಿಯೊಂದು ಚೆಕ್ಕ ಹಾಗೂ ಪಾಸ್ ಬುಕ್‌ಗಳನ್ನು ವಶಕ್ಕೆ ಪಡೆದುಕೊಂಡು, ವಿವರವಾದ ಪಂಚನಾಮೆಯನ್ನು ಜರುಗಿಸಿ ರಾತ್ರಿ 09-00 ರಿಂದ 10-30 ರವರೆಗೆ ಮನೆಯಲ್ಲಿರುವ ಲೇಟ್ ಬೆಳಕಿನ ಅಡಿಯಲ್ಲಿ ಪಂಚನಾಮೆಯನ್ನು ತಯಾರಿಸಿರುತ್ತೇವೆ. ಸದ್ರಿ ಪಂಚನಾಮೆಯನ್ನು ಚಾಸಾ 20 ರವರು ಬರೆದಿರುತ್ತಾರೆ. ಸದ್ರಿ ಪಂಚನಾಮೆಗೆ ನಾನು ಹಾಗೂ ಪಂಚರು ಸಹಿಯನ್ನು ಮಾಡಿರುತ್ತೇವೆ. ನಂತರ ಅಲ್ಲಿಂದ ಆರೋಪಿತ ಹಾಗೂ ಮುದ್ದೆ ಮಾಲು, ಪಂಚನಾಮೆಯೊಂದಿಗೆ ಠಾಣೆಗೆ ಹಾಜರಾಗಿ ದೂರು ನೀಡಿರುತ್ತೇವೆ.

ದೂರನಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು, ದೂರಿನ್ನು ನಿಪಿ 1 ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಿಪಿ 1 ಎ ಎಂದು ಗುರುತಿಸಲಾಯಿತು. ಪಂಚನಾಮೆಯಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು, ಪಂಚನಾಮೆಯನ್ನು ನಿಪಿ 2 ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಿಪಿ 2 ಎ ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದಿರುವ ಚೆಕ್‌ಗಳನ್ನು ಹಾಗೂ ಪಾಸಬುಕ್‌ಗಳನ್ನು ನೋಡಿ ಗುರುತಿಸಿದ್ದು, ಚೆಕ್ಕಗಳನ್ನು ಒಟ್ಟಾರೆಯಾಗಿ ಮು. ಮಾ 1 ಎಂದು ಗುರುತಿಸಲಾಯಿತು. ಪಾಸ್‌ಬುಕಗಳನ್ನು ಒಟ್ಟಾರೆಯಾಗಿ ಮು. ಮಾ 2 ಎಂದು ಗುರುತಿಸಲಾಯಿತು. ಆರೋಪಿತನನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿ ಈ ದಿನ ನ್ಯಾಯಾಲಯದಲ್ಲಿ

ಗೈರು ಹಾಜರಿರುತ್ತಾರೆ. ಈ ಸಂದರ್ಭದಲ್ಲಿ ಆರೋಪಿ ಪರ ವಕೀಲರು ಆರೋಪಿಯ ಗುರುತಿಸುವಿಗೆ ಯಾವುದೇ ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ.

ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ ಎಸ್.ಕೆ.ಎಸ್ ವಕೀಲರಿಂದ.

ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಯಿತು)

ಓ.ಹೇ.ಕೇ. ಸರಿ ಆದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ದಾಂಡೇಲಿ.